ಬಡತನದಿಂದಾಗಿ ಬಾಲ್ಯದಿಂದಲೂ ಜೀತಕ್ಕಿದ್ದ ಅವನು ನಂಬಿಕಸ್ಥ ಆಳಾಗಿದ್ದ. 10 ಗುಂಟೆ ಜಮೀನೇ ಅವನಜ್ಜ, ಅಪ್ಪನ ಆಸ್ತಿಯಾಗಿತ್ತು. ಸುಬ್ಬ ರಾಯರ ಮನೆಯ ಎತ್ತು ಗಳಲ್ಲೇ ಅದನ್ನು ಉತ್ತು ಬಿತ್ತಿ ಬೆಳೆಯುತ್ತಿದ್ದ. ಅವನ ಹೆಂಡತಿ ಹಸಿರಿಯೂ ಸುಬ್ಬರಾಯರ ಹೊಲ, ಗದ್ದೆ, ತೋಟಗಳಲ್ಲಿ ಕೊಟ್ಟಿಗೆ ಗೊಬ್ಬರ ಹರವಲು, ಬೀಜ ಬಿತ್ತಲು ಇನ್ನಿತರೆ ಕೆಲಸಗಳಿಗೆ ಹೋಗುತ್ತಿದ್ದಳು. ಬೋಗಯ್ಯನಿಗೆ ಇಬ್ಬರು ಗಂಡು ಮಕ್ಕಳು. ಶಾಲೆಗೆ ಹೋಗುತ್ತಿದ್ದ ಅವಕ್ಕೆ ಬಟ್ಟೆ, ಬರೆ, ಪುಸ್ತಕ ಎಲ್ಲ ಸುಬ್ಬರಾಯರೇ ಕೊಡಿಸುತ್ತಿದ್ದರು. ವರ್ಷ ಕ್ಕಿಷ್ಟು ದವಸ, ಹಬ್ಬ, ಜಾತ್ರೆ ಹರಿದಿನಗಳಿಗೆ ಕೈಗೊಂದಿಷ್ಟು ಕಾಸು ಕೊಡುತ್ತಿದ್ದರು. ಹೆಚ್ಚು ಜಮೀನು ಇರುವ ಒಕ್ಕಲಿಗರು, ಸುಬ್ಬರಾಯರಿಗಿಂತಲೂ ಹೆಚ್ಚು ದುಡ್ಡು, ಭೋಗ್ಯಕ್ಕೆ 20 ಗುಂಟೆ ಹೊಲ ಕೊಡುತ್ತೇವೆ, ತಮ್ಮ ಮನೆಯಲ್ಲಿ ಜೀತಕ್ಕಿರುವಂತೆ ಆಸೆ ಹುಟ್ಟಿಸಿದರೂ ಬೋಗಯ್ಯ ಹೋಗಿರಲಿಲ್ಲ. ತನ್ನನ್ನು ಚಿಕ್ಕಂದಿನಿಂದ ಸಾಕಿ, ಕಷ್ಟ ಸುಖಕ್ಕಾಗುತ್ತಿರುವ ಸುಬ್ಬರಾಯರ ಕುಟುಂಬಕ್ಕೆ ನಿಯತ್ತಾಗಿದ್ದ. ಹೀಗಾಗಿ ಗೊದ್ಲೆಗೆ ಮಾಂಸ ತಿನ್ನಿಸಲು ಬೋಗಯ್ಯನೇ ಸರಿ ಎಂಬ ತೀರ್ಮಾನಕ್ಕೆ ಬ್ರಾಹ್ಮಣ ಯುವಕ ಬಂದಿದ್ದ.

'ಬೋಗಯ್ಯ ಬಾ ಇಲ್ಲಿ'

'ಯೋನ್ ಸ್ವಾಮಿ?'

'ನಿನ್ನಿಂದ ಒಂದು ಕೆಲಸವಾಗ್ಬೇಕು'

'ಅದೇನ್ ಯೋಳಿ'

'ಗೊದ್ಲೆ ಜನಿವಾರ ಹಾಕ್ಕಂಡು ಬ್ರಾಹ್ಮಣನಾಗಬೇಕು ಅಂತಿರೋದು ಸರೀನಾ ಹೇಳು'.

'ಹೇ ಬುಡಿ, ಕಾಗೆಗ್ಯಾಕೆ ಕೋಗಿಲೆ ಆಗೋ ಆಸೆ. ಅವ್ನ ಬುದ್ದಿನಾ ನಾ ಒಪ್ಪಕ್ಕಿಲ್ಲ'.

'ಬೋಗಯ್ಯ, ನೀನು ಏನಾರ ಮಾಡಿ ಗೊದ್ಲೆಗೆ ಮಾಂಸ ತಿನ್ನಿಸ್ಬೇಕು'

'ಅವ್ನಿಗೆ ಮಾಂಸ ತಿನ್ಸಬೇಕಾ. ಯಾಕೆ?' ಆಶ್ಚರ್ಯದಿಂದ ಬೋಗಯ್ಯ ಕೇಳಿದ.

'ಯಾಕೆ ಅಂತ ಆಮೇಲೆ ಹೇಳ್ತೀನಿ'

ಸ್ವಲ್ಪ ಹೊತ್ತು ಯೋಚಿಸಿದ ಬೋಗಯ್ಯ, 'ಆತು. ನೀವು ಕೋಳಿ ಕೊಂಡುಕೊಳ್ಳೋಕೆ ಕಾಸು ಕೊಡಿ' ಎಂದ.

ಅವನಿಗೆ ದುಡ್ಡು ಕೊಟ್ಟ ಯುವಕ, 'ಬೋಗಯ್ಯ



ಗೊದ್ಲೆ ನಿನ್ಜಾತಿಯವನು ಅಂತ ಏನಾರ ಮನಸು ಬದಲಾಯಿಸಿ ಬಿಟ್ಟೀಯ' ಎಂದು ಅನುಮಾನ ವ್ಯಕ್ತಪಡಿಸಿದ.

'ಅದ್ಯಾಕೆ ಹಂಗಂತೀರ?'

'ಆಯಿತು, ನಿನ್ನ ಮೇಲೆ ನನಗೆ ನಂಬಿಕೆ ಇದೆ. ಆದರೆ ಹುಷಾರು. ವಿಷಯ ಯಾರಿಗೂ ಗೊತ್ತಾಗ ಬರ್ದು. ಗೊತ್ತಾದ್ರೆ ಕೆಲ್ಸ ಕೆಡುತ್ತೆ'.

'ನೀವು ಯೋಳಿದ ಎಂತೆಂತ ಕೆಲ್ಸ ಮಾಡೀವ್ನಿ. ಇಲ್ಲಿಗಂಟ ಯಾರಿಗಾರ ಸುಳಿವು ಸಿಕ್ಕೈತ? ಇದೂ ಹಂಗೆಯ' ಎನ್ನುತ್ತ ದುಡ್ಡನ್ನು ತನ್ನ ಚೆಡ್ಡಿ ಜೇಬಿನಲ್ಲಿಟ್ಟುಕೊಂಡು ಹೊರಟವನು ಗೌಡರೊಬ್ಬರ ಮನೆಯಲ್ಲಿ ಕೋಳಿ ಖರೀದಿಸಿ, ತನ್ನ ಗುಡಿಸಲಿಗೋಗಿ ಮಂಕರಿಯಲ್ಲಿ ಅದನ್ನು ಕವುಚಿದ. ತನ್ನ ಹೆಂಡತಿ, ಮಕ್ಕಳಿಗೆ ವಿಷಯ ತಿಳಿಸಿದ. ಒತ್ತಾರಿಕೆ, ಗೊದ್ಲೆಯನ್ನು ಆಟವಾಡುವ ನೆಪದಲ್ಲಿ ಸುಬ್ಬರಾಯರ ಜಮೀನಿನ ಹತ್ತಿರ ಕರೆತರುವಂತೆ ಹೇಳಿ, ತಿರುಗ ಸುಬ್ಬರಾಯರ ಕೊಟ್ಟಿಗೆಯತ್ತ ಹೊರಟ.

ಸುಬ್ಬರಾಯರ ಮಗ ಹೇಳಿದ ಕೆಲಸವನ್ನು ಕುತಂತ್ರ ದಿಂದ ಹೇಗೆ ಕಾರ್ಯರೂಪಕ್ಕೆ ತರಬೇಕೆಂಬುದರ ಬಗ್ಗೆ ಅವನು ಒಂದು ತೀರ್ಮಾನಕ್ಕೆ ಬಂದಿದ್ದ.